# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-2291/2017/ಡಿಆರ್‌ಇ-1
ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-3471/2019/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 10/11/2020

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ.ಲಗುಮ ರೆಡ್ಡಿ ಬಿನ್ ಲೇಟ್.ಮುನಿವೆಂಕಟಪ್ಪ, ಗೋಪಸಂದ್ರ ಗ್ರಾಮ, ಊಲವಾಡಿ ಅಂಚೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಸಲ್ಲಿಸಿರುವ ಮೇಲ್ಕಂಡ ದೂರುಗಳ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಲಗುಮ ರೆಡ್ಡಿ ಬಿನ್ ಲೇಟ್.ಮುನಿವೆಂಕಟಪ್ಪ, ಗೋಪಸಂದ್ರ ಗ್ರಾಮ, ಊಲವಾಡಿ ಅಂಚೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ರವರು ನೀಡಿರುವ ದೂರುಗಳ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ-2291/2017 ರಲ್ಲಿನ ಎದುರುದಾರರಾದ ಶ್ರೀಮತಿ.ಹೆಚ್.ವಿ.ಉಮಾ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ, ಎಂ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಮತ್ತು ದೂರು ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ-3471/2019 ರಲ್ಲಿನ ಎದುರುದಾರರಾದ (1) ಶ್ರೀ.ಮಂಜುನಾಥ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮತ್ತು (2) ಶ್ರೀ.ಮಧು, ಕ್ಲರ್ಕ್, ಊಲವಾಡಿ ಗ್ರಾಮ ಪಂಚಾಯಿತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧ ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಊಲವಾಡಿ ಗ್ರಾಮಪಂಚಾಯಿತಿಯ ಹಿಂದಿನ ಕಾರ್ಯದರ್ಶಿಯಾಗಿದ್ದ ಎದುರುದಾರರು ಗೋಪಸಂದ್ರ ಗ್ರಾಮದ ವಾಸಿಗಳಾದ ಬಿ.ನಾರಾಯಣಪ್ಪ ಬಿನ್ ಮುನಿಶಾಮಪ್ಪ, ಇ.ನಾರಾಯಣಸ್ವಾಮಿ ಬಿನ್ ಮುನಿಶಾಮಪ್ಪ, ವೆಂಕಟೇಶ್, ಜಿ.ನಾರಾಯಣಪ್ಪ ಮತ್ತು ಪಾರ್ವತಮ್ಮ ಕೋಂ ವೆಂಕಟೇಶಪ್ಪ ಎಂಬುವವರಿಗೆ ಚೆಕ್ಕುಬಂದಿ ಬರೆದಿರುತ್ತಾರೆ ಮತ್ತು ನಾರಾಯಣಸ್ವಾಮಿ ಬಿನ್ ಚಿಕ್ಕನಾರಾಯಣಪ್ಪ ರವರಿಗೆ 658-335 ರಲ್ಲಿ 30*40 ಖಾತೆಯನ್ನು ಹೊಸದಾಗಿ ಮಾಡಿರುತ್ತಾರೆಂದು ಆಪಾದಿಸಿ, ಅಕ್ರಮವಾಗಿ ಬರೆದಿರುವ ಖಾತೆಗಳ ಅಡಿಗಳು ಮತ್ತು ಚೆಕ್ಕುಬಂದಿಗಳನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ. ತಮ್ಮ ಪಿತ್ರಾರ್ಜಿತ ಅನುಭವದಲ್ಲಿರುವ 50*40 ಅಡಿಯ

ಒಂದು ಸೈಟು ಮತ್ತು 20*20 ಮತ್ತು 25*35 ಅಡಿಯ 2 ಸೈಟುಗಳು ಹನುಮಂತಪ್ಪ ಬಿನ್ ಮುನಿವೆಂಕಟಪ್ಪ ಅವರಿಗೆ ಸೇರಿದ್ದು, ಅದರ ಒಳಗಡೆ ಚೆಕ್ಕುಬಂದಿ ಹಾಕಿ ಅಕ್ರಮ ಖಾತೆಯನ್ನು ನಾರಾಯಣಸ್ವಾಮಿ ಬಿನ್ ಚಿಕ್ಕನಾರಾಯಣಪ್ಪ ಎನ್ನುವರಿಗೆ ಎದುರುದಾರರು ಮಾಡಿರುತ್ತಾರೆಂದು ಆಪಾದಿಸಿರುತ್ತಾರೆ.

3) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಆಪಾದಿಸಿರುವ ಖಾತೆ ಸಂಖ್ಯೆಗಳ ಬಾಬ್ತು ಯಾವ ಕಾರ್ಯದರ್ಶಿಯ ಅವಧಿಯಲ್ಲಿ ತಿದ್ದುಪಡಿ ಆಗಿರುತ್ತದೆಯೆಂದು ಸೂಕ್ತ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ, ಆದರೆ, ಸದರಿ ತಿದ್ದುಪಡಿಗಳನ್ನು ತನ್ನ ಅವಧಿಯಲ್ಲಿ ನಮೂದಿಸಿರುವುದಿಲ್ಲವೆಂದು ಅಕ್ರಮ ಖಾತೆ ಮತ್ತು ತಿದ್ದುಪಡಿಗಳನ್ನು ವಜಾಗೊಳಿಸಲು ತಾಲ್ಲೂಕು ಪಂಚಾಯಿತಿಯಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆಯೆಂದು ತಿಳಿಸಿರುತ್ತಾರೆ. 2009-10ನೇ ಸಾಲಿನಲ್ಲಿ ಅಂದಿನ ಕಾರ್ಯದರ್ಶಿ ರಮೇಶ್, ಗೋಪಸಂದ್ರ ಅವರಿಂದ ಲಂಚದ ಬೇಡಿಕೆ ಮೇರೆಗೆ ಟ್ರ್ಯಾಪ್ ಆಗಿದ್ದು ತಿಳಿದುಬಂದಿರುತ್ತದೆಯೆಂದು ತಿಳಿಸಿರುತ್ತಾರೆ.

4) ಇದೇ ವಿಷಯಕ್ಕೆ ಸಂಬಂಧಿಸಿದಂತೆ, ಇದೇ ದೂರುದಾರರು ಸಲ್ಲಿಸಿದ ದೂರಿನ ಆಧಾರದ ಮೇರೆಗೆ ಹಾಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ.ಮಂಜುನಾಥ್ ಮತ್ತು ಗುಮಾಸ್ತ ಶ್ರೀ.ಮಧು ಎನ್ನುವವರ ವಿರುದ್ಧ ಬಿಡಿ-3471/2019 ರಲ್ಲಿ ಪ್ರಕರಣ ದಾಖಲಾಗಿದ್ದು, 1ನೇ ಎದುರುದಾರರು ಸದರಿ ಪ್ರಕರಣದಲ್ಲಿ ಆಕ್ಷೇಪಣೆಯೊಂದಿಗೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ದಿ.27/12/2019 ರ ಆದೇಶದಂತೆ ಸದರಿ ಪ್ರಕರಣವನ್ನು ಈ ಪ್ರಕರಣದೊಂದಿಗೆ ವಿಲೀನಗೊಳಿಸಿ ಆದೇಶಿಸಲಾಗಿದೆ.

5) ದೂರುದಾರರು ಹಲವಾರು ಬಾರಿ ಪ್ರತ್ಯುತ್ತರವನ್ನು ಸಲ್ಲಿಸಿ ತಮ್ಮ ದೂರಿನ ಆಪಾದನೆಗಳನ್ನು ಪುನರುಚ್ಚರಿಸಿರುತ್ತಾರೆ.

6) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ದಾಖಲಾತಿಗಳ ಸಮೇತ ಸ್ಪಷ್ಟ ಅಭಿಪ್ರಾಯ ನೀಡುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಇವರಿಗೆ ಆದೇಶಿದ್ದು, ಅವರು ವರದಿ ಸಲ್ಲಿಸಿರುತ್ತಾರೆ. ತಮ್ಮ ವರದಿಯಲ್ಲಿ

*(1) ಜಿ.ಎನ್.ನಾರಾಯಣಸ್ವಾಮಿ ಬಿನ್ ಚಿಕ್ಕನಾರಾಯಣಪ್ಪರವರ ತಂದೆಯ ಕಾಲದಿಂದಲೂ ಅನುಭವದಲ್ಲಿದ್ದ ಆಧಾರದ ಮೇರೆಗೆ 30*40 ಅಡಿ ವಿಸ್ತೀರ್ಣದ ನಿವೇಶನವನ್ನು ಹೌಸ್‌ಲಿಸ್ಟ್ ನಂ.658/335 ರಂತೆ ಹಾಗೂ ಪಾರ್ವತಮ್ಮ ಕೋಂ ವೆಂಕಟೇಶಪ್ಪ ರವರಿಗೆ ಅನುಭವದ ಆಧಾರದ ಮೇರೆಗೆ 30*44 ಅಡಿ ವಿಸ್ತೀರ್ಣದ ನಿವೇಶನದ ಖಾತೆ ಮಾಡಿಕೊಟ್ಟಿದ್ದು, ಖಾತೆ ನಂ.323/209ಬಿ ಯಲ್ಲಿ ಜಿ.ನಾರಾಯಣಪ್ಪರವರಿಗೆ ಅನುಭವದ ಆಧಾರದ ಮೇರೆಗೆ 32*52 ಅಡಿಗಳ ವಿಸ್ತೀರ್ಣವನ್ನು ತಿದ್ದುಪಡಿ ಮಾಡಿ ಚೆಕ್ಕುಬಂದಿಗಳನ್ನು ಎದುರುದಾರರು ಬರೆದುಕೊಟ್ಟಿರುವುದು ತನಿಖೆಯಲ್ಲಿ ಕಂಡುಬಂದಿರುತ್ತದೆ.*

*(2) ದೂರುದಾರರು ಆರೋಪಿಸಿರುವ ಉಳಿದ ನಿವೇಶನಗಳ ಖಾತೆಗಳಿಗೆ ಸಂಬಂಧಿಸಿದಂತೆ ಹಿಂದಿನ ಅವಧಿಯ ಕಾರ್ಯದರ್ಶಿಗಳು ಚೆಕ್ಕುಬಂದಿ ಮತ್ತು ವಿಸ್ತೀರ್ಣಗಳನ್ನು ಬರೆದಿದ್ದು, ಎದುರುದಾರರು ಬರೆದಿರುವುದು ತನಿಖೆಯಲ್ಲಿ ಕಂಡುಬಂದಿರುವುದಿಲ್ಲ.*

*(3) ದೂರುದಾರರ ಖಾತೆ ಸಂ.557/4 ಮತ್ತು ನಾರಪ್ಪ ಬಿನ್ ಭೈರಪ್ಪ ರವರ ಹೆಸರಿನಲ್ಲಿರುವ ಖಾತೆ ಸಂ.559/6 ನಿವೇಶನಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣಗಳಿದ್ದು, ವಜಾ ಆಗಿದ್ದು, ದೂರುದಾರರು ಅಥವಾ ರಮೇಶ್‌ರವರ ಪರವಾಗಿ ಆದೇಶವಾಗಿರುವುದಿಲ್ಲ.*

*(4) ಗ್ರಾಮಠಾಣಾಗಳಲ್ಲಿ ಖಾಲಿಯಿರುವ ಸ್ಥಳಗಳಲ್ಲಿ ಅನುಭವದಲ್ಲಿರುವ ಆಧಾರದ ಮೇರೆಗೆ ಗ್ರಾಮಪಂಚಾಯಿತಿ ಅಧಿಕಾರಿಗಳು ಅರ್ಜಿಗಳು ಬಂದಿದ್ದರ ಮೇರೆಗೆ ಪರಿಶೀಲಿಸಿ ಹೊಸದಾಗಿ ಖಾತೆ, ವಿಸ್ತೀರ್ಣ ಹಾಗೂ ಚೆಕ್ಕುಬಂದಿಗಳನ್ನು ಕಾಲಕ್ರಮೇಣವಾಗಿ ಹೌಸ್ ರಿಜಿಸ್ಟರ್‌ಗಳಲ್ಲಿ ವಿವರಗಳನ್ನು ನಮೂದಿಸಿ ದಾಖಲೆಗಳನ್ನು ಕೊಡುವ ಪದ್ಧತಿ ಇರುವುದರಿಂದ ಎದುರುದಾರರು ಸಹ ಅನುಭವದ ಆಧಾರದ ಮೇರೆಗೆ ಕೆಲವು ಖಾತೆಗಳನ್ನು ಮಾಡಿಕೊಟ್ಟಿದ್ದು, ಅಕ್ರಮವಾಗಿ ಖಾತೆಗಳನ್ನು ಮಾಡಿಕೊಟ್ಟಿರುವುದು ಕಂಡುಬರುವುದಿಲ್ಲ.*

*(5) ದೂರುದಾರರಿಗೆ ಸಂಬಂಧಿಸಿದ ಖಾತೆ ಸಂ.557/4, ಅದೇ ಗ್ರಾಮದ ಹನುಮಂತಪ್ಪನಿಗೆ ಸೇರಿದ ಖಾತೆ ಸಂ.643/319ಓ ರಲ್ಲಿ 25*35 ಮತ್ತು ಖಾತೆ ಸಂ.643/319ಪಿ ಯಲ್ಲಿ 20*20 ಅಡಿ ನಿವೇಶನಗಳಿರುವ ಬಗ್ಗೆ ದಾಖಲೆಗಳಲ್ಲಿ ನಮೂದಾಗಿದ್ದು, ತಿಪ್ಪೇಗುಂಡಿಗಳನ್ನು ಹಾಕಿಕೊಂಡಿರುವುದು ಕಂಡುಬಂದಿರುತ್ತದೆ.*

*(6) ವಿವಾದಾಸ್ಪದ ಖಾತೆ ಸಂ.658/335, 559/6, 557/4, 643/319ಓ ಮತ್ತು 643/319ಪಿ ಯ ನಿವೇಶನಗಳನ್ನು ಯಾವುದೇ ವಸತಿ ಯೋಜನೆಯಲ್ಲಿ ಫಲಾನುಭವಿಗಳಿಗೆ ಹಂಚಿಕೆಯಾದ ನಿವೇಶನಗಳಾಗಿರುವುದಿಲ್ಲ ಮತ್ತು ಸದರಿ ನಿವೇಶನಗಳು ಇರುವ ಸ್ಥಳಗಳು ಗ್ರಾಮಠಾಣಾಗೆ ಸೇರಿದ ಸ್ಥಳಗಳಾಗಿದ್ದು, ಈ ಸ್ಥಳಗಳಲ್ಲಿ ಹಿಂದಿನಿಂದಲೂ ಅನುಭವದಲ್ಲಿದ್ದ ಆಧಾರದ ಮೇರೆಗೆ ಅನುಭವದಾರರು ಖಾತೆಗಳನ್ನು ಮಾಡಿಸಿಕೊಂಡಿರುವುದು ಕಂಡುಬಂದಿರುತ್ತದೆ.*

*(7) ದೂರುದಾರರಿಗೆ ಸಂಬಂಧಿಸಿದ ಖಾತೆ ನಂ.557/4 ಇದೇ ನಿವೇಶನದ ಬದಿಯಲ್ಲಿನ ಖಾಲಿ ಸ್ಥಳವನ್ನು ಅನುಭವದ ಆಧಾರದ ಮೇರೆಗೆ ಖಾತೆ ಮಾಡಿಸಿಕೊಂಡಿರುವ ಖಾತೆ ನಂ.659/6, 658/335, 705/718, 643/319ಓ ಮತ್ತು 643/319ಪಿ ಯ ನಿವೇಶನಗಳ ಖಾತೆಗಳನ್ನು ರದ್ದಗೊಳಿಸಿ ಎಲ್ಲಾ ನಿವೇಶನಗಳನ್ನು ಹೊಸದಾಗಿ ಅಳತೆ ಮಾಡಿಸಿ ಅನುಭವದಂತೆ ವಿಸ್ತೀರ್ಣದ ಅಳತೆಯುಳ್ಳ ನಿವೇಶನಗಳಿಗೆ ಚೆಕ್ಕುಬಂದಿಗಳನ್ನು ಗುರ್ತಿಸಿ ಹೊಸದಾಗಿ ಖಾತೆ ಮಾಡಿಸಿಕೊಡಲು ಸಂಬಂಧಪಟ್ಟ ಗ್ರಾಮಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಆದೇಶ ನೀಡುವುದು ಸೂಕ್ತವೆಂದು ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ.*

7) ಸದರಿ ವರದಿಯೊಂದಿಗೆ 1999-2000ನೇ ಸಾಲಿನ ಅಸೆಸ್‌ಮೆಂಟ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್, 2013-14 ರ ಅಸೆಸ್‌ಮೆಂಟ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ಗಳು, 2002-03 ರ ಡಿಮಾಂಡ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್, ದೂರುದಾರರು ಪಿ.ಡಿ.ಓ, ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ನೀಡಿರುವ ದಿ.5/2/13 ಮತ್ತು ದಿ.6/2/13 ರ ಅರ್ಜಿಯ ಪ್ರತಿಗಳು, 1999-2000/2001-02 ರ ಅಸೆಸ್‌ಮೆಂಟ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್, 2012-13 ರ ತೆರಿಗೆ ನಿರ್ಧರಣಾ ಪಟ್ಟಿ ಮತ್ತು ತೆರಿಗೆ ಬೇಡಿಕೆ ವಸೂಲಾತಿ ಮತ್ತು ಬಾಕಿ ರಿಜಿಸ್ಟರ್‌ನ ಪ್ರತಿ, ರಸೀದಿಗಳ ನಕಲುಗಳು, ಓ.ಎಸ್.47/94 ರ ತೀರ್ಪು ಮತ್ತು ಡಿಕ್ರಿ, ಓ.ಎಸ್.99/11 ರ ತೀರ್ಪು, ಓ.ಎಸ್.54/10 ರ ತೀರ್ಪು ಮತ್ತು ಡಿಕ್ರಿ, ಆರ್.ಎ.131/12 ರ ತೀರ್ಪು, ಎದುರುದಾರರು, ದೂರುಬಾರರು, ಜಿ.ಎನ್.ನಾರಾಯಣಸ್ವಾಮಿ, ಕೆ.ಆಂಜಪ್ಪ, ಜಿ.ಎನ್.ರಮೇಶ ರವರ ಹೇಳಿಕೆಗಳು ಮತ್ತು ಭಾವಚಿತ್ರಗಳನ್ನು ಹಾಜರು ಪಡಿಸಿರುತ್ತಾರೆ. ಎದುರುದಾರರು ದಿ.1/11/2011 ರಿಂದ

28/11/2016 ರವರೆಗೆ ಊಲವಾಡಿ ಗ್ರಾಮಪಂಚಾಯಿತಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ ಎನ್ನುವ ದೃಢೀಕರಣ ಪತ್ರವನ್ನು ಹಾಜರು ಪಡಿಸಲಾಗಿದೆ.

8) ಎದುರುದಾರರು ತನಿಖಾಧಿಕಾರಿಗಳ ಮುಂದೆ ಕಂಡಿಕೆ 3, 7 ಮತ್ತು 9 ರಲ್ಲಿ ಈ ಕೆಳಕಂಡಂತೆ ಹೇಳಿಕೆ ನೀಡಿರುವುದು ಕಂಡುಬರುತ್ತದೆ:

*"ಕಂಡಿಕೆ 3) ಗೋಪಸಂದ್ರ ಗ್ರಾಮಕ್ಕೆ ಸಂಬಂಧಿಸಿದ ಹೌಸ್‌ಲಿಸ್ಟ್ ನಂ.323/209ಬಿ ಮತ್ತು ಸಿ ಎರಡು ಖಾತೆಗಳನ್ನು ಕ್ರಮವಾಗಿ ವೆಂಕಟೇಶ್ ಮತ್ತು ಪಾರ್ವತಮ್ಮ ಕೋಂ ವೆಂಕಟೇಶ್ ರವರಿಗೆ ಖಾತೆಗಳನ್ನು ಮಾಡಿರುತ್ತೇನೆ. ಅದೇ ರೀತಿ ಜಿ.ನಾರಾಯಣಪ್ಪ ರವರಿಗೂ ಸಹ ಖಾತೆ ಇರುತ್ತದೆ. ಹಳೆಯ ಹೌಸ್‌ಲಿಸ್ಟ್ ರಿಜಿಸ್ಟರ್‌ನಲ್ಲಿ ವೆಂಕಟೇಶ್ ಮತ್ತು ಜಿ.ನಾರಾಯಣಪ್ಪ ರವರಿಗೆ ಖಾತೆ ಇದ್ದು ಅವರಿಗೆ ಸದರಿ ಖಾತೆಗಳನ್ನು ಉಳಿಸಿರುತ್ತೆ. ಆದರೆ ವೆಂಕಟೇಶಪ್ಪ ರವರು ಮೃತಪಟ್ಟಿದ್ದರಿಂದ ಅವರು ವಾಸವಿದ್ದ ಮನೆಯ ವಿಸ್ತೀರ್ಣ 22*11ರ ಮನೆಯ ಪಕ್ಕದಲ್ಲಿ 30*44 ಅಡಿ ವಿಸ್ತೀರ್ಣ ಜಾಗವು ತನ್ನದೇ ಎಂದು ವೆಂಕಟೇಶಪ್ಪನವರ ಪತ್ನಿಯಾದ ಶ್ರೀಮತಿ.ಪಾರ್ವತಮ್ಮ ರವರು ಹಳೆಯ ಹೌಸ್‌ಲಿಸ್ಟ್ ಕಾಪಿಗಳನ್ನು ತಂದು ತೋರಿಸಿ ನನಗೆ ಹೊಸ ದಾಖಲೆ ಕೊಡುವಂತೆ ತಿಳಿಸಿದ್ದರು. ಆ ಸಮಯದಲ್ಲಿ ನಾನು ಹೌಸ್‌ಲಿಸ್ಟ್ ರಿಜಿಸ್ಟರ್‌ನಲ್ಲಿ ಪರಿಶೀಲನೆ ಮಾಡಲಾಗಿ ಅವರ ಹೆಸರು ಇಲ್ಲದ ವಿಷಯವನ್ನು ತಿಳಿಸಿದೆ. ಆಗ ಅವರು ನನ್ನ ಹೆಸರು ಬಿಟ್ಟು ಹೋಗಿದ್ದರಿಂದ ಹಳೆಯ ಹೌಸ್‌ಲಿಸ್ಟ್‌ನಂತೆ ನನ್ನ ಹೆಸರನ್ನು ಹೊಸ ಹೌಸ್‌ಲಿಸ್ಟ್‌ಗೆ ಸೇರಿಸಬೇಕೆಂದು ತಿಳಿಸಿದ್ದರಿಂದ ನಾನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ನಂತರ ಪಾರ್ವತಮ್ಮ ಕೋಂ ವೆಂಕಟೇಶಪ್ಪ ರವರಿಗೆ ಖಾಲಿ ನಿವೇಶನವಿದ್ದುದ್ದರಿಂದ 30*44 ಅಡಿ ವಿಸ್ತೀರ್ಣದ ರಿಜಿಸ್ಟರ್‌ನಲ್ಲಿ ನಮೂದು ಮಾಡಿರುತ್ತೇನೆ. ಆದರೆ ಹಳೆಯ ಹೌಸ್‌ಲಿಸ್ಟ್ ರಿಜಿಸ್ಟರ್‌ನಲ್ಲಿ ಜಿ.ನಾರಾಯಣಪ್ಪ ರವರಿಗೆ 22*11 ಅಡಿ ವಿಸ್ತೀರ್ಣವನ್ನು ಬರೆದಿದ್ದು ಅವರು ಸಹ ಹಳೆಯ ಹೌಸ್‌ಲಿಸ್ಟ್ ಕಾಪಿಯನ್ನು ತೋರಿಸಿ ವಿಸ್ತೀರ್ಣವನ್ನು ಬದಲಾಯಿಸಿಕೊಡುವಂತೆ ಹೇಳಿದ್ದರಿಂದ ನಾನು ಸ್ಥಳ ಪರಿಶೀಲನೆ ಮಾಡಿ ಅಳತೆ ಮಾಡಿಸಿ ನಂತರ ಹೊಸ ಹೌಸ್‌ಲಿಸ್ಟ್ ರಿಜಿಸ್ಟರ್‌ನಲ್ಲಿ ವಿಸ್ತೀರ್ಣವನ್ನು ಬ್ರಾಕೆಟ್ ಹಾಕಿ 30*52 ಅಡಿ ವಿಸ್ತೀರ್ಣವನ್ನು ಬರೆದು ದಾಖಲೆಯನ್ನು ನೀಡಿರುತ್ತೇನೆ.*

*ಕಂಡಿಕೆ 7) ಹೌಸ್‌ಲಿಸ್ಟ್ ನಂ.658/335ಕ್ಕೆ ಸಂಬಂಧಿಸಿದಂತೆ ಜಿ.ಎನ್.ನಾರಾಯಣಸ್ವಾಮಿ ಬಿನ್ ಚಿಕ್ಕನಾರಾಯಣಪ್ಪ ರವರಿಗೆ 30*40 ಅಡಿ ವಿಸ್ತೀರ್ಣದ ನಿವೇಶನವನ್ನು ಅನುಭವದ ಆಧಾರದ ಮೇರೆಗೆ ಖಾತೆ ಮಾಡಿಕೊಡುವಂತೆ ಅರ್ಜಿ ನೀಡಿದ್ದರಿಂದ ನಾನು ಸ್ಥಳ ಪರಿಶೀಲನೆ ಮಾಡಿದ್ದು ಆ ಸಮಯದಲ್ಲಿ ನಾರಾಯಣಸ್ವಾಮಿ ರವರ ತಂದೆಯವರ ಕಾಲದಿಂದಲೂ ಅನುಭವದಲ್ಲಿದ್ದು ಎರಡು ದೊಡ್ಡ ಅರಳಿ ಮರಗಳು ಮತ್ತು ತಿಪದಪೆ ಇದ್ದ ಕಾರಣದಿಂದಾಗಿ ಗ್ರಾಮಸ್ಥರ ಒಪ್ಪಿಗೆ ಮೇರೆಗೆ ಹಾಗೂ ಅವರಿಗೆ ಬೇರೆ ನಿವೇಶನ ಇಲ್ಲದ ಕಾರಣ ನಾನೇ ಖಾತೆ ಮಾಡಿಕೊಟ್ಟಿರುತ್ತೇನೆ. ಹೌಸ್‌ಲಿಸ್ಟ್ ರಿಜಿಸ್ಟರ್‌ನಲ್ಲಿ ಕ್ರ.ಸಂ.658/334 ಮತ್ತು 658/335ರ ಖಾತೆಗಳಿಗೆ ಸಂಬಂಧಿಸಿದಂತೆ ರಿಜಿಸ್ಟರ್‌ನಲ್ಲಿ ಖಾಲಿ ಇದ್ದ ಕಾರಣ ನನ್ನ ಅವಧಿಯಲ್ಲಿ ಹೌಸ್‌ಲಿಸ್ಟ್ ನಂ.658/335ರಲ್ಲಿ ಜಿ.ಎನ್.ನಾರಾಯಣಸ್ವಾಮಿ ಬಿನ್ ಚಿಕ್ಕನಾರಾಯಣಪ್ಪ ರವರಿಗೆ 30*40 ಅಡಿ ವಿಸ್ತೀರ್ಣದ ನಿವೇಶನವನ್ನು ಖಾತೆ ಬಗ್ಗೆ ರಿಜಿಸ್ಟರ್‌ನಲ್ಲಿ ಬರೆದಿರುತ್ತೇನೆ.*

*ಕಂಡಿಕೆ 9) ಲಗುಮರೆಡ್ಡಿ ರವರ ಹೆಸರಿನಲ್ಲಿರುವ ಖಾತೆ ಸಂಖ್ಯೆ.557/4 ರ 50*40 ಅಡಿ ವಿಸ್ತೀರ್ಣದ ನಿವೇಶನಕ್ಕೆ ಸಂಬಂಧಪಟ್ಟಂತೆ ಚಕ್ಕುಬಂದಿಯು ಇಲ್ಲದ ಕಾರಣ ಸದರಿ ನಿವೇಶನದ ವಿಚಾರದಲ್ಲಿ ನ್ಯಾಯಾಲಯದಲ್ಲಿ ಪ್ರಕರಣಗಳು ನಡೆಯುತ್ತಿದ್ದ ಸಮಯದಲ್ಲಿ ನನಗೆ ಚಕ್ಕುಬಂದಿಯನ್ನು ನಮೂದಿಸಿಕೊಡುವಂತೆ ಲಗುಮರೆಡ್ಡಿ ರವರು ನನ್ನನ್ನು ಕೇಳಿದ್ದು ಈ ಸಮಯದಲ್ಲಿ ನಾನು ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದರಿಂದ ಚಕ್ಕುಬಂದಿಯನ್ನು ನಮೂದಿಸಿಕೊಡಲು ಆಗುವುದಿಲ್ಲವೆಂದು ತಿಳಿಸಿ ಅವರ ಮನವಿಯನ್ನು ತಿರಸ್ಕರಿಸಿದ್ದರಿಂದ ನನ್ನ ಮೇಲೆ ಈ ರೀತ್ಯ ಆರೋಪ ಮಾಡಿರುತ್ತಾರೆ."*

9) ದೂರುದಾರರು ಮತ್ತು ತನಿಖಾಧಿಕಾರಿಯವರು ಹಾಜರು ಮಾಡಿರುವ ಅಸೆಸ್‌ಮೆಂಟ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್ ಮತ್ತು ಡಿಮಾಂಡ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ಗಳನ್ನು ಪರಿಶೀಲಿಸಿದಾಗ, ಕೆಲವು ಖಾತೆ ನಂಬರ್‌ಗಳ ಬಾಬ್ತು ಮಹಜರ್ ಪ್ರಕಾರ ಎಂದ ಹೇಳಿ ಅಳತೆ ತಿದ್ದುಪಡಿ ಮಾಡಿರುವುದು ಕಂಡುಬರುತ್ತದೆ.

10) ದೂರುದಾರರು ದಿ.4/8/18 ರಂದು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ದೂರುದಾರರು ದಿ.25/11/2017 ಒಂದು ಅರ್ಜಿ ನೀಡಿದ್ದು ಅದರಲ್ಲಿ ಇ-ಸ್ಕೆಚ್ ತಯಾರಿಸಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಬರೆದಿದ್ದು, ಸರ್ವೆ ಮಾಡುವುದರಿಂದ ತನಗೆ ತೊಂದರೆಯಾಗುತ್ತದೆಯೆಂದು ಕೇಸುಗಳು ಚಾಲ್ತಿಯಲ್ಲಿರುವುದರಿಂದ ಸರ್ವೆ ಮಾಡಬೇಡಿ ಎಂದು ಬರೆದಿರುವುದು ಕಂಡುಬರುತ್ತದೆ. ಅದೇರೀತಿ ಊಲವಾಡಿ ಗ್ರಾಮಪಂಚಾಯಿತಿಗೆ ಸಹ ದೂರುದಾರರು ಅದೇ ದಿನದಂದು ಪತ್ರ ಬರೆದು ಇ-ಸ್ಕೆಚ್ ಮಾಡಲು ಸರ್ವೆ ಕಚೇರಿಗೆ ಕಳುಹಿಸಿದ್ದಾರೆಂದು ಉಲ್ಲೇಖಿಸಿರುತ್ತಾರೆ.

11) ಈ ಎಲ್ಲಾ ದಾಖಲಾತಿಗಳು ಮತ್ತು ವರದಿಗಳನ್ನು ಪರಿಶೀಲಿಸಿದಾಗ, ಊಲವಾಡಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಗೋಪಸಂದ್ರ ಗ್ರಾಮದಲ್ಲಿ ಯಾವುದೇ ಮಾಲೀಕತ್ವದ ದಾಖಲೆಗಳಿಲ್ಲದೆ ಗ್ರಾಮಠಾಣಾ ಸ್ಥಳದಲ್ಲಿರುವ ಜಾಗಗಳ ಬಾಬ್ತು 'ಅನುಭವದ ಆಧಾರದ ಮೇರೆಗೆ' ಎಂದು ಅಸೆಸ್‌ಮೆಂಟ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ಗಳಲ್ಲಿ ಖಾತೆದಾರರ ಹೆಸರನ್ನು, ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ತೋರಿಸಿರುವುದು ಕಂಡುಬಂದಿರುತ್ತದೆ ಮತ್ತು ಸದರಿ ದಾಖಲೆಗಳ ಆಧಾರದ ಮೇರೆಗೆ ನ್ಯಾಯಾಲಯದಲ್ಲಿ ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ಸಲ್ಲಿಸಿದ್ದ ಎಲ್ಲಾ ದಾವೆಗಳು ವಜಾ ಆಗಿರುವುದು ಕಂಡುಬರುತ್ತದೆ.

12) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಕಲಂ 210 ರಲ್ಲಿ "ಕಾಲಕಾಲಕ್ಕೆ ಗ್ರಾಮಪಂಚಾಯಿತಿಯ ಸಹಮತಿಯೊಂದಿಗೆ ಸಂದರ್ಭಾನುಸಾರ ಸರ್ಕಾರ, ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿಯಲ್ಲಿ ನಿಹಿತಗೊಳಿಸಿರುವ ಸ್ವತ್ತನ್ನು ಯಾವುದೇ ಷರತ್ತುಗಳೊಂದಿಗೆ ಅಥವಾ ಷರತ್ತುಗಳಿಲ್ಲದೆ ಗ್ರಾಮಪಂಚಾಯಿತಿಯಲ್ಲಿ ನಿಹಿತವಾಗಿರತಕ್ಕದ್ದು ಎಂದು ನಿರ್ದೇಶಿಸುವುದಕ್ಕೆ ಸರ್ಕಾರ, ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಸಕ್ಷಮವಾಗಿರತಕ್ಕದ್ದಾಗಿರುತ್ತದೆ ಪರಂತು ಸಂದರ್ಭಾನುಸಾರ ಸರ್ಕಾರ, ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿಯ ಪೂರ್ವಾನುಮೋದನೆ ಇಲ್ಲದೆ ಗ್ರಾಮಪಂಚಾಯಿತಿಯಿಂದ ಮಾಡಲಾದ ಸ್ಥಿರ ಸ್ವತ್ತಿನ ಯಾವುದೇ ಗುತ್ತಿಗೆ, ಮಾರಾಟ ಅಥವಾ ಇತರೆ ವರ್ಗಾವಣೆಯು ಮಾನ್ಯವಾಗತಕ್ಕದ್ದಲ್ಲ" ಎಂದು ಹೇಳಲಾಗಿದೆ.

13) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸುತ್ತೋಲೆ ಸಂ.ಗ್ರಾಅಪ 126 ಗ್ರಾಪಂಅ 2003, ಬೆಂಗಳೂರು, ದಿ.6/6/2003 ರಲ್ಲಿ ಈ ಕೆಳಕಂಡಂತೆ ನಿರ್ದೇಶಿಸಲಾಗಿದೆ:

"ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಲ್ಲಿ ಗ್ರಾಮ ಪಂಚಾಯತಿಗಳು "ಖಾತೆ" ನಿರ್ವಹಿಸುವ ಬಗ್ಗೆ ಯಾವುದೇ ಪ್ರಸ್ತಾಪ ಇರುವುದಿಲ್ಲ. ವಾಸ್ತವವಾಗಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಯ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994, ತೆರಿಗೆ ಮತ್ತು ಫೀಜುಗಳನ್ನು ವಿಧಿಸುವ ಬಗ್ಗೆ ಕಾರ್ಯಸೂಚಿಯನ್ನು ನಿಗದಿಪಡಿಸುತ್ತದೆ. ಅದರಲ್ಲಿನ ನಿಯಮ 7ರನ್ವಯ ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಗೆ ಬರುವಂತಹ ಪ್ರತಿಯೊಂದು ಮನೆ ಅಥವಾ ಭೂಮಿಯ ಕ್ರಮಸಂಖ್ಯೆ, ಒಡೆಯ ಮತ್ತು ಅಧಿಭೋಗದಾರನು ಯಾರಾದರೂ ಇದ್ದರೆ ಅವನ ಹೆಸರು, ಕಟ್ಟಡಗಳ ವಾರ್ಷಿಕ ಬಾಡಿಗೆ ಮೌಲ್ಯ ಮತ್ತು ಅದರ ಮೇಲೆ ತೆರಿಗೆ ನಿರ್ಧರಿಸಿದ ಮೊಬಲಗು ಇವುಗಳನ್ನೊಳಗೊಂಡಂತೆ ಒಂದು "ನಿರ್ಧರಣಾ ಪಟ್ಟಿಯನ್ನು" ತಯಾರಿಸಿ ನಿರ್ವಹಿಸಬೇಕೆಂದು ತಿಳಿಸಲಾಗಿದೆ. ಮುಂದುವರೆದು, ಕಟ್ಟಡ ಅಥವಾ ಭೂಮಿಯ ಒಡೆತನದ ವರ್ಗಾವಣೆಯನ್ನು ಮಾಡುವ ಬಗ್ಗೆ ಸದರಿ ನಿಯಮಗಳ ನಿಯಮ 12ರಲ್ಲಿ ತಿಳಿಸಲಾಗಿದೆ. ಆದರೆ, ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿರುವ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ನಮೂನೆ 8 ಅಥವಾ 9 ಅಥವಾ 10 ಅಥವಾ 12ನ್ನು ಖಾತೆಯೆಂದು ಅಥವಾ ಖಾತೆಯ ಉದ್ಧೃತಭಾಗ (Khatha Extract) ಎಂದು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದು ಸರಿಯಾದ ಕ್ರಮವಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕ ಪತ್ರಗಳು ಮತ್ತು ಬಡ್ಜೆಟ್) ನಿಯಮಗಳು, 1995 ರಲ್ಲಿ ನಮೂನೆ 8, 9, 10 ಮತ್ತು 12 ರ ಪ್ರಸ್ತಾವನೆ ಇರುತ್ತದೆ. ಇದರ ವಿವರಗಳು ಕೆಳಕಂಡಂತಿರುತ್ತದೆ.

| ನಮೂನೆ ಸಂಖ್ಯೆ | ಯಾವ ಉದ್ದೇಶಕ್ಕಾಗಿ ಬಳಸಬೇಕು | ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕ ಪತ್ರಗಳು ಮತ್ತು ಬಡ್ಜೆಟ್) ನಿಯಮಗಳು, 1995 ರ ನಿಯಮಾವಳಿಯ ಸಂಖ್ಯೆ |
|---|---|---|
| 8 | ಗ್ರಾಮ ಪಂಚಾಯತಿಗೆ ಖಜಾನೆಗೆ ಹಣ ಕಟ್ಟಿದ ರಿಜಿಸ್ಟರ್ | ನಿಯಮ 40 |
| 9 | ಲೆಕ್ಕ ಪತ್ರಗಳ ಮಾಸಿಕ ವಿವರಣೆ | ನಿಯಮ 42 |
| 10 | ತೆರಿಗೆ ಸಂಗ್ರಹಣೆಗಳ ದಿನ ಪುಸ್ತಕ | ನಿಯಮ 44(2) |
| 12 | ಯಾವುದೇ ಸಾಲಿನಲ್ಲಿ ನಿರ್ಧರಿಸಲಾದ ತೆರಿಗೆಗಳ ಬೇಡಿಕೆ ರಿಜಿಸ್ಟರ್ | ನಿಯಮ 45(1) |

ನಮೂನೆ 8 ಅಥವಾ 9 ಅಥವಾ 10, 12 ರ ಉಪಯೋಗ ಈ ರೀತಿ ನಿಖರವಾಗಿ ತಿಳಿಸಿದ್ದಾಗ್ಯೂ ಇವುಗಳನ್ನು ಸಾಮಾನ್ಯ ತಿಳುವಳಿಕೆಯಲ್ಲಿ ಇದೇ "ಖಾತೆಯೆಂದು" ಅಥವಾ "ಖಾತೆಯ ಉದ್ಧೃತಭಾಗ" ಎಂದು ನೀಡುತ್ತಿರುವುದು ಕಾನೂನಿನಡಿ ಸರಿಯಾದ ಕ್ರಮವಾಗಿರುವುದಿಲ್ಲ.

ಹಾಗಿದ್ದಲ್ಲಿ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು (ನಾವೆಲ್ಲರೂ ತಿಳಿದಂತೆ ಖಾತೆಯನ್ನು) ಯಾರು ನಿರ್ವಹಿಸಬೇಕೆಂದು ಮುಂದಿನ ಪ್ರಶ್ನೆಯಾಗಿರುತ್ತದೆ. ಕರ್ನಾಟಕ ಭೂಕಂದಾಯ ಕಾಯ್ದೆ, 1964 ಹಾಗೂ ಇದರಡಿ ರಚಿತವಾದ ಕರ್ನಾಟಕ ಭೂಕಂದಾಯ ನಿಯಮಾವಳಿ, 1966, ಇದರ ಅಧ್ಯಾಯ 12 ರಡಿಯಲ್ಲಿ ತಿಳಿಸಿರುವಂತೆ ಕೃಷಿಯೇತರ ಜಮೀನಿನಲ್ಲಿರುವ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ Survey settlement and land records ಇಲಾಖೆಯು ಪಟ್ಟಣಗಳಲ್ಲಾಗಲಿ, ನಗರಗಳಲ್ಲಾಗಲಿ ಅಥವಾ ಹಳ್ಳಿಗಳಲ್ಲಾಗಲಿ ಈ ಕರ್ತವ್ಯವನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ. ಆದ್ದರಿಂದ, ಕೃಷಿಯೇತರ ಜಮೀನಿನಲ್ಲಿರುವ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಕಂದಾಯ ಇಲಾಖೆಯೇ

*ನಿರ್ವಹಿಸಬೇಕಾಗುತ್ತದೆ. ಗ್ರಾಮ ಪಂಚಾಯತಿಗಳು ಗ್ರಾಮಠಾಣ ಜಾಗದಲ್ಲಾಗಲಿ, ಕೃಷಿಯೇತರ ಜಮೀನಿನಲ್ಲಾಗಲಿ ಅಥವಾ ಕೃಷಿ ಜಮೀನಿನಲ್ಲಾಗಲಿ ನಿರ್ಮಿಸಿರುವ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ ತೆರಿಗೆ ವಸೂಲಿ ಮಾಡಲು ಹಾಗೂ ಇದಕ್ಕೆ ಸಂಬಂಧಿಸಿದಂತೆ ನಿರ್ಧರಣಾ ಪಟ್ಟಿಯನ್ನು ನಿರ್ವಹಿಸಲು ಅವಕಾಶವಿದೆಯೇ ಹೊರತು ಈ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ ಖಾತೆ ಇತ್ಯಾದಿಗಳನ್ನು ನೀಡಲು ಅವಕಾಶವಿರುವುದಿಲ್ಲ. ಈ ಕಾರ್ಯವನ್ನು ಕಂದಾಯ ಇಲಾಖೆಯೇ ನಿರ್ವಹಿಸುವುದು ಕಾನೂನಿನಡಿ ಸೂಕ್ತವಾದ ಕ್ರಮವಾಗಿರುತ್ತದೆ.*

*ಆದ್ದರಿಂದ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಗ್ರಾಮ ಪಂಚಾಯತಿಗಳು ಯಾವುದೇ ನಮೂನೆಯಲ್ಲಿ ಖಾತೆ ನೀಡುವುದನ್ನು ನಿರ್ಬಂಧಿಸಲಾಗಿದೆ ಆದರೆ, ತೆರಿಗೆ ಪಾವತಿದಾರರಿಗೆ ಅವನಿಗೆ ಸಂಬಂಧಿಸಿದ ನಿರ್ಧರಣಾ ಪಟ್ಟಿಯ ನಕಲನ್ನು ನೀಡಲು ಯಾವುದೇ ಅಭ್ಯಂತರವಿರುವುದಿಲ್ಲ."*

14) ಕಂದಾಯ ಆಕಾರ ಪಟ್ಟಿಯಲ್ಲಿ ಹೆಸರನ್ನು ತೋರಿಸುವುದರಿಂದ, ಸದರಿ ವ್ಯಕ್ತಿಗೆ ಯಾವುದೇ ರೀತಿ ಸದರಿ ಆಸ್ತಿಯ ಮೇಲೆ ಮಾಲೀಕತ್ವದ ಹಕ್ಕು ಬರುವುದಿಲ್ಲ ಮತ್ತು ಅದರ ಆಧಾರದ ಮೇರೆಗೆ ಕಂದಾಯ ವಸೂಲಿಗಾಗಿ ಮಾತ್ರ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಆದರೆ, ಈ ಪ್ರಕರಣದಲ್ಲಿ ಬಹಳಷ್ಟು ಜನರಿಗೆ ಅನುಭವದ ಆಧಾರದ ಮೇರೆಗೆ ಎಂದು ಹೇಳಿ ಖಾತೆದಾರರ ಕಾಲಂನಲ್ಲಿ ಹೆಸರು ತೋರಿಸಿ ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ನಮೂದಿಸಿದ್ದು, ಇದರಿಂದಾಗಿ ಹಲವಾರು ಸಿವಿಲ್ ವ್ಯಾಜ್ಯಗಳು ದಾಖಲಾಗಿರುವುದು ಕಂಡುಬರುತ್ತದೆ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಂತಾಮಣಿ ಇವರ ದಿ.18/12/2019 ರ ವರದಿಯಲ್ಲಿಯೂ ದೂರುದಾರರಿಗೆ ಸಂಬಂಧಿಸಿದ್ದು ಎಂದು ಹೇಳಲಾದ ಆಸ್ತಿ ಸಂ.557/4ರ ಬಾಬ್ತು ಚಿಂತಾಮಣಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆಯೆಂದು ಹೇಳಿರುವುದು ಕಂಡುಬರುತ್ತದೆ.

15) ಆದ್ದರಿಂದ, 'ಅನುಭವದ ಆಧಾರ' ಎನ್ನುವ ಮೇರೆಗೆ ಯಾವುದೇ ದಾಖಲೆಗಳಿಲ್ಲದೆ ಗೋಪಸಂದ್ರ ಗ್ರಾಮಪಂಚಾಯಿತಿ ಕಾರ್ಯದರ್ಶಿಯವರು ಅಸೆಸ್‌ಮೆಂಟ್ ರಿಜಿಸ್ಟರ್‌ಗಳಲ್ಲಿ ಖಾತೆದಾರರ ಹೆಸರು, ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ನಮೂದಿಸಿರುವುದು ಕಂಡುಬರುತ್ತದೆ.

16) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸಂಬಂಧಪಟ್ಟ ಗ್ರಾಮಪಂಚಾಯಿತಿಗೆ ಖಾತೆ ದಾಖಲೆ ಹಾಗೂ ಇತರೆ ದಾಖಲೆಗಳನ್ನು ನೀಡುವ ಸಂದರ್ಭದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ಮತ್ತು ಮೇಲೆ ಉಲ್ಲೇಖಿಸಿದ ದಿ.6/6/2003 ರ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮತ್ತು ಗೋಪಸಂದ್ರ ಗ್ರಾಮ ಪಂಚಾಯಿತಿಯಲ್ಲಿ ಈಗಾಗಲೇ ಯಾವುದೇ ದಾಖಲೆಗಳ ಆಧಾರವಿಲ್ಲದೆ ಅಕ್ರಮ ಖಾತೆ ಮಾಡಿರುವ ಆಸ್ತಿಗಳ ಬಾಬ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ

ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

19-11-20

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.